ಬೆಳ್ಳನೆಯ ಗರಿಗರಿ ಜುಬ್ಬದ ಮೇಲೆ ಯಾರೊ ಕೈಹಾಕಿದಷ್ಟೆ ಗೊತ್ತು. ನೆಂದ ವಾಲ್‌ಪೋಸ್ಟರಿನಂತೆ ಅದರ ತೋಳಿನ ಭಾಗ ಜರ್ರನೆ ಕಿತ್ತುಹೋಯಿತು. ನಮ್ಮನ್ನು ಕರೆಯಿಸಿದ್ದ ಯುವಜನ ಇಲಾಖಾ ಅಧಿಕಾರಿ ನಾಪತ್ತೆಯಾಗಿದ್ದರು. ಅಷ್ಟರಲ್ಲಿ 'ಕಲ್‌ಬೇಡ. ಕಣಿಗೆ ತಗಳ್ರೊ' ಎಂಬ ಶಬ್ದ ಕಿವಿಗೆ ಬಿತ್ತು. ಕೂಡಲೇ ನಾನೂ ಸಭಾಧ್ಯಕ್ಷರೂ ವೇದಿಕೆಯ ಹಿಂಬದಿಯಿಂದ ನುಸುಳಿ ಬಸ್‌ರಸ್ತೆ ಕಡೆ ಓಟ ಕಿತ್ತೆವು. ಜಲ್ಲಿಕಲ್ಲು ಮೇಲೆದ್ದ ರಸ್ತೆ. ಕತ್ತಲು. ಒಂದು ಮೈಲಿ ಓಡಿದ ಬಳಿಕ ಟಾರ್‌ರಸ್ತೆ ಸಿಕ್ಕಿತು. ಯಾವುದೊ ಲಾರಿಯನ್ನು ಅಡ್ಡಗಟ್ಟಿ ಮನೆಮುಟ್ಟುವ ಹೊತ್ತಿಗೆ ನಡುರಾತ್ರಿ. ಹಸಿವು ನೀರಡಿಕೆಯಿಂದ ಜೀವ ಹೋಗುವಂತಾಗಿತ್ತು.

ಕೆಲವೊಮ್ಮೆ ಭಾಷಣ ಚೆನ್ನಾಗಿ ನಡೆಯುತ್ತದೆ. ಆದರೆ ವಾರದ ನಂತರ ಸಿಡಿಲು ಮುರಿದುಕೊಂಡು ಬೀಳುತ್ತದೆ. ಕನ್ನಡ ಸಂಘವೊಂದರ ಅಧ್ಯಕ್ಷರು, ಸದಸ್ಯರು ವಸಂತ ಸಾಹಿತ್ಯೋತ್ಸವದ ಆಹ್ವಾನ ಪತ್ರವನ್ನು ಕೈಯಾರೆ ಕೊಡಲು ಅತಿಥಿಯಾದ ನನಗೆ ಮುಟ್ಟಿಸಲು ಮನೆಗೇ ಬರುತ್ತೇನೆಂದರು. ಅವರು ತೋರುತ್ತಿರುವ ವಿಶ್ವಾಸಕ್ಕೆ ರೋಮಾಂಚನವಾಗುತ್ತಿದ್ದರೂ ಆಹ್ವಾನಪತ್ರ ಕೊಡಲು ಗಾಡಿಮಾಡಿಕೊಂಡು ಮುನ್ನೂರು ಕಿಲೋಮೀಟರ್ ಬರುವುದು ಸರಿಯೆನಿಸಲಿಲ್ಲ. 'ಅಷ್ಟು ಕಷ್ಟದಿಂದ ಯಾಕ್ ಬರ್ತೀರಿ? ಹೆಂಗೂ ಫೋನಲ್ಲಿ ಮಾತಾಡಿದ್ದೀರಿ. ಪೋಸ್ಟಲ್ಲಿ ಕಳಿಸಿ ಸಾಕು' ಎಂದೆ. 'ಮುಖತಃ ಇನ್ವಿಟೇಶನ್ ಮುಟ್ಟಿಸುವುದು ನಮ್ಮ ಸಂಸ್ಕೃತಿ. ಹಂಗೆ ಸ್ವಲ್ಪ ಹಂಪಿಯನ್ನೂ ನೋಡಬೇಕಾಗಿತ್ತು' ಎಂದುಕೊಂಡು ಬಂದರು. 'ಎಷ್ಟೊಂದು ಶಿಷ್ಟಚಾರ ಪಾಲಿಸ್ತಿದ್ದೀರಲ್ಲಪ್ಪಾ' ಎಂದೆ. 'ನಮ್ಮ ಸಂಘ ವಿಶಿಷ್ಟತೆಗಳಿಗೆ ಖ್ಯಾತಿ. ಇನ್ನೊಂದು ವಿಶಿಷ್ಟತೆ ಅಂದರೆ, ಅತಿಥಿಗಳಿಗೆ ವಸತಿ ಊಟ ಶಾಲು ಫಲಕ ಕೊಡುತ್ತೇವೆ. ಮೆರವಣಿಗೆ ಮಾಡುತ್ತೇವೆ. ಪ್ರಯಾಣದ ವೆಚ್ಚಕೊಟ್ಟು ಅಪಮಾನ ಮಾಡಲ್ಲ' ಎಂದರು. ನಾನು ಮೂಕನಾದೆ. ಪ್ರಯಾಣ ವೆಚ್ಚ ಸ್ವೀಕರಿಸುವುದು ಅಪಮಾನ ಎನ್ನುವುದಾದರೆ ನಾನದಕ್ಕೆ ತಯಾರಾಗಿದ್ದೆ. ಬಾಯಿಬಿಟ್ಟು ಹೇಳುವುದು ಹೇಗೆ? ತಂಡದಲ್ಲಿದ್ದ ಸ್ಥಳೀಯ ಪತ್ರಕರ್ತನೊಬ್ಬ 'ಕಾರಿಲ್ಲದೆ ಬರುವುದಿಲ್ಲ' ಎಂದು ನಾನು ಹೇಳುವುದನ್ನು ವರದಿ ಮಾಡಲೆಂದೇ ಬಂದಂತಿದ್ದ. ಲಕ್ಷಾಂತರ ಸಂಬಳದ ಪ್ರೊಫೆಸರ್, ಕನ್ನಡದ ಕೆಲಸಕ್ಕೆ ಬಾರದೆ ಸಣ್ಣವರಾದರು ಎಂಬ ವಾಕ್ಯ ಆಗಲೇ ಬರೆದುಕೊಂಡಿದ್ದನೊ ಏನೋ? ಹಂಪಿಯ ಬಂಡೆ ಉರುಳುವುದು ಖಚಿತವಾಯಿತು. ಮೆಲ್ಲಗೆ 'ನಿಮ್ಮ ಬಜೆಟೆಷ್ಟು?' ಎಂದೆ. 'ಐದು ಲಕ್ಷ. ಶಾಮಿಯಾನ ದೀಪಾಲಂಕಾರಕ್ಕೆ ಎರಡು. ಊಟಕ್ಕೆ ಎರಡು. ಬಾಕಿ ಒಂದರಲ್ಲಿ ಮೆರವಣಿಗೆ ಹಾರ ಶಾಲು ಹಣ್ಣು ಹಂಪಲು. ಇನ್ನೂ ವಾಲಗದವರಿಗೆ ಹೊಂದಿಸಬೇಕು.' ಲೆಕ್ಕ ಚೊಕ್ಕವಾಗಿತ್ತು. ಸದ್ಯ, ವಾದ್ಯದ ಬಾಪ್ತು ಅತಿಥಿಗಳೇ ಕೊಡಬೇಕು ಎನ್ನಲಿಲ್ಲ. ನಾನು ಯಾವ ಬಸ್ಸಿನಲ್ಲಿ ಕುಳಿತರೆ ಯಾವ ಟೈಮಿಗೆ ತಲುಪಬಹುದು ಎಂಬ ಮಾಹಿತಿಯನ್ನು ಒದಗಿಸಿದರು. ಅವರ ಹೋಮ್‌ವರ್ಕ್ ಚಕಿತಗೊಳಿಸಿತು. ಒಳಗೆ ಚಹ ಕುದಿಸುತ್ತ ನನ್ನ ಜೀವನ ಸಂಗಾತಿ ಇದನ್ನೆಲ್ಲ ಕೇಳಿಸಿಕೊಳ್ಳುತ್ತಿದ್ದಳು. ಅವಳು ಭುವನೇಶ್ವರಿ ಚಿತ್ರಪಟವಿರುವ ಟ್ಯಾಕ್ಸರನ್ನೇರಿ ಲೇಖಕಪತ್ನಿಯ ಸ್ಥಾನದಲ್ಲಿ ನಿಂತು, ಜನರತ್ತ ಕೈಬೀಸಿ ಧನ್ಯವಾದ ಅರ್ಪಿಸುವ ಬಯಕೆ ಇಟ್ಟುಕೊಂಡಿದ್ದಳು. ಅದಕ್ಕಾಗಿ ರಿಹರ್ಸಲ್ ಸಹ ಮಾಡಿದ್ದಳೆಂದು ಕಾಣುತ್ತದೆ. ಅವಳಿಗೆ ಸಹಜವಾಗಿಯೇ ನಿರಾಶೆಯಾಗಿತ್ತು. ಬಂದವರು ಹೊರ ಹೋದೊಡನೆ ಅವಳು ಆಸ್ಫೋಟಿಸಿದಳು: 'ಜುಜುಬಿ ಕಾರ್ಡು ಕೊಡೋಕೆ ಟ್ಯಾಕ್ಸಿಯಲ್ಲಿ ಬರೋಕಾಗುತ್ತೆ. ನಮಗೆ ಮಾತ್ರ ನಿಮ್ಮ ಖರ್ಚಲ್ಲೇ ಬನ್ನಿ ಅಂತಿದಾರೆ. ನಾನಂತೂ ಬರೋಲ್ಲ. ಮರ್ಯಾದೆ ಇದ್ದರೆ ನೀನೂ ಹೋಗಬಾರದು.' 'ಕನ್ನಡದ ಕೆಲಸ. ಇದನ್ನೆಲ್ಲ ದೊಡ್ಡದು ಮಾಡಬಾರದು' ಎಂದು ಅವಳನ್ನು